# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/222/13-14

ದಿನಾಂಕ :27-09-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
| --- | --- |
| 1.ಶ್ರೀ ಜಿ.ಪ್ರಹಲ್ಲಾದ್ ರೆಡ್ಡಿ ತಂದೆ ಸೋಮರೆಡ್ಡಿ, ಶಂಕರ ಕಾಲೋನಿ,2ನೇ ಅಡ್ಡರಸ್ತೆ,ಸತ್ಯನಾರಾಯಣಪೇಟೆ, ಬಳ್ಳಾರಿ<br>**(ಶ್ರೀ ಎಂ. ಬಸವರಾಜ, ವಕೀಲರು, ಬಳ್ಳಾರಿ)** | (1) ತಹಶೀಲ್ದಾರರು, ಸಿರುಗುಪ್ಪ<br>(2) ಕಂದಾಯ ನಿರೀಕ್ಷಕರು, ಸಿರುಗುಪ್ಪ<br>(3) ಗ್ರಾಮಲೆಕ್ಕಾಧಿಕಾರಿಗಳು, ಬಗ್ಗೂರು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
| --- | --- | --- | --- |
| ಸಿರುಗುಪ್ಪ | ಬಗ್ಗೂರು | 41/1 | 7.30 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಸಿರುಗುಪ್ಪ ಇವರ ಎಂ ಆರ್ ನಂ 48/10-11 ದಿನಾಂಕ 14/12/2010 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 03.12.2013, 17.01.2014, 31.01.2014, 04.02.2014, 14.02.2014, 11.07.2014, 24.07.2014,24.03.2015,21.07.2015,03.11.2015, 08.03.2016,30.08.2016,27.09.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ, ಸಿರುಗುಪ್ಪ ತಾಲ್ಲೂಕಿನ ಬಗ್ಗೂರು ಗ್ರಾಮದ ಸ.ನಂ 41/1 ವಿಸ್ತೀರ್ಣ: 7.30 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಸಿರುಗುಪ್ಪ ಇವರ ಎಂ ಆರ್ ನಂ 48/10-11 ದಿನಾಂಕ 14/12/2010 ರ ಆದೇಶದವನ್ನು ಪ್ರಶ್ನಿಸುತ್ತಾ, ಕ್ರಯಪತ್ರದಂತೆ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯೊಂದಿಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ 4(1) LAQ ನೋಟಿಸ್ ಜಾರಿಯಾದ ನಂತರ ಖರೀದಿ ಪ್ರಕ್ರೀಯೆ ನಡೆದಿದ್ದು, ಎಂ.ಆರ್.ನಂ.48/10-11 ವನ್ನು ಪರಿಶೀಲಿಸಿದಾಗ ಕಂಡು ಬರುತ್ತದೆ. ಎಂ ಆರ್ ನಂ 48/10-11 ದಿನಾಂಕ 14/12/2010 ಸಕಾರಣವಾಗಿಯೇ ತಿರಸ್ಕರಿಸಿರುವುದು ಕಂಡು ಬಂದಿರುವುದರಿಂದ ಸದರಿ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಿಸಿ ಆದೇಶಿಸುವ ಕೆಳಕಂಡಂತೆ ಆದೇಶ.

:: ಆದೇಶ ::

**ವಾದಿಯ ಮೇಲ್ಮನವಿಯನ್ನು ವಜಾಗೊಳಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಬಗ್ಗೂರು ಗ್ರಾಮದ ಸ.ನಂ 41/1 ವಿಸ್ತೀರ್ಣ: 7.30 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಯ ಮೇಲ್ಮನವಿಯನ್ನು ಇದೇ ಹಂತದಲ್ಲಿ ವಜಾಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ:27.09.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ